ವಿ. ಹಮೀದ್, ವಿಟ್ಲ
*ಇಷ್ಟರತನಕ ಬೆಲೆಯೇ ಏರದ ವಸ್ತು ಯಾವುದು ಗುರೂ?*



ಬೀದಿನಾಯಿ. ಅದಕ್ಕೆ ಅಂದಿಗೂ ಒಂದೇ ಕಲ್ಲು, ಇಂದಿಗೂ ಒಂದೇ ಕಲ್ಲು.

ಅರ್ಪಣ್ ಎಸ್.ಎಂ. ಮೈಸೂರು
*ಚಿಕ್ಕ ವಯಸ್ಸಿನವರು ಸಾವನ್ನಪ್ಪುತ್ತಿದ್ದಾರೆ, ಖಾಯಿಲೆಯಿಂದ ನರಳಿ ಸಾವು ಬೇಡುವ ವೃದ್ಧರು ಜೀವಿಸುತ್ತಿದ್ದಾರೆ. ಏನೀ ವಿಧಿಯಾಟ?*
ಜನ್ಮದೋಷ. ಅವತಾರಗಳನ್ನೆಲ್ಲ ಇಲ್ಲಿಯೇ ಎತ್ತಿದ್ದರಿಂದ ದೇವನೂ ನಮ್ಮಂತೆಯೇ ಕ್ಯೂ ವಿರೋಧಿ.

ಅಮರಯ್ಯಾ ಪತ್ರಿಮಠ, ಶೋರಾಪೂರ
*ಗೋಡೆಗಳಿಗೆ ಕಿವಿ, ಕಿಟಕಿಗಳಿಗೆ ಕಣ್ಣು ಇವೆಯಂತೆ. ಬಾಗಿಲಿಗೆ?*
ಬಾಯಿ! ವೃಂದಾಬಾಯಿ, ಸಾವಿತ್ರಿಬಾಯಿ, ಗೋದೂಬಾಯಿ, ರಮಾಬಾಯಿ. ಮನ್ನೂಬಾಯಿ...

ಎಚ್.ಆರ್. ದೇಸಾಯಿ, ರಾಯಚೂರು
*ಈ ಜಗತ್ತನ್ನು ನಡೆದಾಡಿ, ದುರ್ಬೀನಿನಿಂದ, ಸೂಕ್ಷ್ಮದರ್ಶಕದಿಂದ ನೋಡಿದೆ. ಇನ್ನೂ ಏನು ನೋಡುವುದು ಬಾಕಿ ಉಳಿದಿದೆ?*




ಮುಖ್ಯವಾದುದನ್ನೇ ಬಿಟ್ಟಿರಲ್ಲ! ಹೃದಯದ ಕಣ್ಣಿನಿಂದ ನೋಡದಿದ್ದರೆ ಜೀವನವೇ ಅಪೂರ್ಣ.

ಸವಿತಾ ರವಿ, ಸುಟ್ಟಟ್ಟಿ
*ಕಣ್ಮುಚ್ಚಿ ಕಾಣುವ ಕನಸಿಗೂ, ಕಣ್ತೆರೆದು ಕಾಣುವ ಕನಸಿಗೂ ಏನು ವ್ಯತ್ಯಾಸ?*
ಕಣ್ಮುಚ್ಚಿ ಕಾಣುವ ಕನಸು ಕಣ್ಬಿಡುವವರೆಗೆ; ಕಣ್ಬಿಟ್ಟು ಕಾಣುವ ಕನಸು ಕಣ್ಣು ಮುಚ್ಚುವವರೆಗೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ಅಲೋಪತಿ, ಹೋಮಿಯೋಪತಿ ಇದ್ದಂತೆ ಅಲೋಪತ್ನಿ, ಹೋಮಿಯೋಪತ್ನಿ ಏಕಿಲ್ಲ?*
ಔಷಧಿಯು ಹೆಣ್ಣಿನಂತೆ ಒಂದೊಂದು ಗಳಿಗೆಗೆ ಒಂದೊಂದು ತರಹ ಆಡೋಲ್ಲವಾದ್ರಿಂದ ಪತಿ ಅನ್ನೋದೇ ಸರಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಕಾನೂನು ಸಚಿವರೇ ನಕಲಿ ಪದವಿ ಪಡೆದರೆ ಏನೆನ್ನಬೇಕು?*
ಬಹಳವೇ ಅನ್ನಬೇಕು. ಆದರೆ ಶಿಷ್ಟಾಚಾರ, ಸಭ್ಯತೆಯ ಕಾರಣಗಳಿಂದ ಅವನ್ನು ಇಲ್ಲಿ ಪ್ರಕಟಿಸಲು ಸಾಧ್ಯವಿಲ್ಲ.

ಎನ್.ಎಸ್. ಆನಂದ್, ಬೆಂಗಳೂರು
*ಹೊಗಳುವುದು, ತೆಗಳುವುದು, ಬೊಗಳುವುದು; ಯಾವುದರಿಂದ ಅಪಾಯ ಕಡಿಮೆ?*
ಬೊಗಳುವುದೇ; ನಾಯಿಗೆ ನಾಯಕರಂತೆ ಒಳ ಉದ್ದೇಶ ಇರುವುದಿಲ್ಲವಲ್ಲ.

ಎಚ್.ಆರ್. ಕಡಿವಾಲ, ಬಾದಾಮಿ
*ಹೆಣ್ಣು ಸಮಾಜದ ಕಣ್ಣು. ಗಂಡು?*
ಆ ಕಣ್ಣಿನ ಪ್ರತಿ ಚಲನವಲನ ಎಡೆಬಿಡದೆ ಗಮನಿಸುವ ಸಿಸಿಟಿವಿ.

ಜಯದೇವ ಹಲಕಿ, ಗೋಕಾಕ
*ಕನ್ನಡ ಚಳವಳಿಗೆ ಗೋಕಾಕ ಚಳವಳಿ ಎಂಬ ಹೆಸರು ಏಕೆ ಬಂತು?*
ಗೋವಿನ ಸೌಮ್ಯತೆ, ಕಾಕದ ಹಂಚಿ ತಿನ್ನುವ ಬುದ್ಧಿ ಇರುವವರ ಚಳುವಳಿಯಾದ್ದರಿಂದ.

ಜಾಕೋಬ್ ಡಿಸೋಜ, ಕುರುವಳ್ಳಿ
*ಥಟ್ಟಂತ ಹೇಳಿ; ಥಟ್ಟಂತ ನಾವು ಸತ್ರೆ ಆತ್ಮ ಎಲ್ಲಿಗೆ ಹೋಗುತ್ತೆ?*
ಸ್ಮಶಾನದ ಮರದ ಕೊಂಬೆಯವರೆಗೆ ಡ್ರಾಪ್ ತೆಗೆದುಕೊಳ್ಳಲು ಡೆಡ್ ವ್ಯಾನ್‌ನೊಳಕ್ಕೆ.

ರಾಜು ಎಸ್. ಗಾಲಿ, ಅಥಣಿ
*ಸಿಹಿ ಕಬ್ಬಿನ ಬೆಲೆ ನಿಗದಿಯಲ್ಲಿ ಸರ್ಕಾರದ ಕಹಿ ಭಾವನೆ ಯಾಕೆ?*
ಸರ್ಕಾರ ಎಂದರೆ ಸರ್‌ರ್‌ರ್ರ್ ಎಂದು ಏರುವ ಖಾರ; ಖಾರಕ್ಕೆ ಸಿಹಿಯ ಬೆಲೆ ತಿಳಿದಿರುವುದಿಲ್ಲ.

ಮಂಜುನಾಥ ಎಸ್., ಗುಂಜೂರು
*ತಿರುಪತಿ ತಿಮ್ಮಪ್ಪ ಶತಮಾನಗಳಿಂದ ನಿಂತೇ ಇದ್ದಾನೆ. ಕಾಲು ನೋಯುವುದಿಲ್ಲವೇ?*
ಏನು ಮಾಡಲಾದೀತು; ಭಕ್ತ ಯಾವಾಗ ಕರೆದರೂ ಸಹಾಯ ಮಾಡಲು ತುದಿಗಾಲಲ್ಲಿ ನಿಂತಿರಬೇಕಲ್ಲ!

## ಬಹುಮಾನಿತ ಪ್ರಶ್ನೆ

ರವೀಂದ್ರನಾಥ, ಯಡಹಳ್ಳಿ
*ಹೃದಯಸಮುದ್ರ ಕಲಕಿದರೆ ಏನು ಸಂಭವಿಸಬಹುದು ಶಿವಾ?*
ಕಡಿಮೆಯೆಂದರೆ ಕಾರ್ಡಿಯಾಲಜಿಸ್ಟ್‌ಗೆ ಎರಡು ಲಕ್ಷ, ಅನಸ್ತೆಟಿಸ್ಟ್‌ಗೆ ಐವತ್ತು ಸಾವಿರ ಸಂಭವಿಸಬಹುದು.

ಎಂ.ಎ. ಕುಮಾರ್, ಬೆಂಗಳೂರು
*ತಾಯಿ, ಮಗಳು, ಸೊಸೆ ಮೂವರೂ ಹೆಣ್ಣುಗಳೇ. ಇವರಲ್ಲಿ ಇರುವ ವ್ಯತ್ಯಾಸವೇನು?*
ಜೀವನದ ಫ್ಯಾಕ್ಟ್ರಿಯಲ್ಲಿ ಕ್ರಮವಾಗಿ ಪ್ರೊಡಕ್ಷನ್, ಎಕ್ಸ್‌ಪೋರ್ಟ್, ಇಂಪೋರ್ಟ್ ಡಿವಿಶನ್‌ಗಳು.

ನೇ.ಗೋ.ಭ., ಕುಕ್ಕೆ ಸುಬ್ರಹ್ಮಣ್ಯ
*ಬೆಳಕು ಜಾಸ್ತಿಯಾದರೂ ದಾರಿ ತೋರುವುದಿಲ್ಲವಂತೆ. ಅದೇ ರೀತಿ ಪ್ರಶ್ನೆಗಳು ಜಾಸ್ತಿಯಾದರೂ...?*
ಚೆನ್ನವೇ. ಮುಗ್ಧತೆ, ಸರಸ, ಬುದ್ಧಿಪ್ರಚೋದನೆ ಹೆಚ್ಚಿದಷ್ಟೂ ಚಂದ.

ಎ. ಅಬೂಬಕ್ಕರ್ ಅನಿಲಕಟ್ಟೆ, ವಿಟ್ಲ
*ದೀನರನ್ನು ಕಂಡು ದುಃಖಿಸಿದ ಗಾಂಧೀಜಿ ನೋಟಿನಲ್ಲಿ ನಗುತ್ತಿದ್ದಾರಲ್ಲಾ?*



ನೋಟು ನಗದು ಎನ್ನುವುದನ್ನು ಸುಳ್ಳು ಮಾಡಲು ನಗುತ್ತಿರುವುದಂತೆ.

ರಾಜಶೇಖರ ಹಾದಿಮನಿ, ಧಾರವಾಡ
*ಕೆಲವು ರಾಜಕಾರಣಿಗಳನ್ನು ಶ್ವಾನಕ್ಕೆ ಹೋಲಿಸಿದ್ದೀರಿ. ನಿಮಗೆ ಝೆಡ್ ಪ್ಲಸ್ ರಕ್ಷಣೆ ಇದೆಯೆ?*
ಓದುಗರ ಪ್ರೀತಿಯೇ ರಕ್ಷಣೆ. ಆ ಮಾತು ಹಾಗಿರಲಿ. ಛೆ! ನಾನು ಹಾಗೆ ಹೋಲಿಸಬಾರದಿತ್ತು. ಕ್ಷಮಿಸಿ ಶ್ವಾನಗಳೇ.

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ
*ಕನ್ನಡ ರಕ್ಷಕರು ಹೇಗಿರಬೇಕು?*
ಪ್ರತಿ ಬೆಳಗ್ಗೆ ದರ್ಭೆಯಿಂದ ನಾಲಿಗೆ ಉಜ್ಜಿಕೊಂಡು 52 ಅಕ್ಷರಗಳ ಉಚ್ಚಾರಣೆ ಸರಿಯಾಗಿ ಮಾಡಿದರೆ ಸಾಕು.

■ ರಾಮ್